# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.</u>

## <u>ಪ್ರಕರಣ ಸಂಖ್ಯೆಃ ಸ್ಪೆಷಲ್ ಎಸ್.ವಿ.ಸಿ.1/2017</u>

ಅ.ಸಾ ಃ 1
ದೋಸಾ ಃ 1

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಮಂಜುನಾಥ ಗಂಗಲ್ |
| ತಂದೆಯ ಹೆಸರು | ಃ | ಕೃಷ್ಣರೆಡ್ಡಿ |
| ವಯಸ್ಸು | ಃ | 59 ವರ್ಷ |
| ಉದ್ಯೋಗ | ಃ | ಡಿಎಸ್.ಪಿ. ಲೋಕಾಯುಕ್ತ ಪೊಲೀಸ ಠಾಣೆ |
| ವಾಸ ಸ್ಥಳ | ಃ | ಕಲಬುರ್ಗಿ |

ದಿನಾಂಕಃ**04/07/2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ : ಪ್ರಾಜ್ಞ ವಿಶೇಷ ಸರ್ಕಾರಿ ಅಭಿಯೋಜಕರಿಂದಃ –</u>**

1. ನಾನು ಲೋಕಾಯುಕ್ತ ಕಛೇರಿ, ಹಾವೇರಿಯಲ್ಲಿ ಪೊಲೀಸ ಇನ್ಸಪೆಕ್ಟರ ಆಗಿ ಅಕ್ಟೋಬರ್-2010 ರಿಂದ ಸೆಪ್ಟೆಂಬರ್-2012 ರವರೆಗೆ ಕರ್ತವ್ಯ ನಿರ್ವಹಿಸಿದ್ದೇನೆ. ದೂರು ಕೊಟ್ಟಾಗ ಸೆಪ್ಟೆಂಬರ್-2012 ರಿಂದ ಫೆಬ್ರುವರಿ-2013 ರವರೆಗೆ ದಾವಣಗೆರೆ ಲೋಕಾಯುಕ್ತ ಪೊಲೀಸ ಠಾಣೆಯಲ್ಲಿ ಪೊಲೀಸ ನಿರೀಕ್ಷಕನಾಗಿ ಕೆಲಸ ಮಾಡುತ್ತಿದ್ದೆ.

2. ನಾನು ಲೋಕಾಯುಕ್ತ ಕಛೇರಿ, ಹಾವೇರಿಯಲ್ಲಿ ಹಾನಗಲ್ಲ ಜಲಾನಯನ ಕಛೇರಿ ಯಲ್ಲಿ ಆರೋಪಿಯು ಕೃಷಿ ಅಧಿಕಾರಿ ಅಂತಾ ಕೆಲಸ ಮಾಡುತ್ತಿದ್ದ. ಆರೋಪಿ ತನ್ನ ಕಛೇರಿಯ ಸೇವಾ ಅವಧಿಯಲ್ಲಿ ಅಕ್ರಮವಾಗಿ ಧನ ಮತ್ತು ಆಸ್ತಿಗಳನ್ನು ಸಂಪಾದಿಸಿರುತ್ತಾರೆ ಅಂತಾ ಮಾಹಿತಿ ಬಂದ ಮೇರೆಗೆ, ನಾನು ಆರೋಪಿಯ ಸೇವಾ ಅವಧಿಯ ವಿವರಗಳನ್ನು ಸಂಗ್ರಹಿಸಿರುತ್ತೇನೆ.

3. ಆರೋಪಿಯ ಕುಟುಂಬ ಸದಸ್ಯರ ಮಾಹಿತಿಯನ್ನು ಸಂಗ್ರಹಿಸಿರುತ್ತೇನೆ. ನಾನು ಸಂಗ್ರಹಿಸಿದ ಮಾಹಿತಿಯಂತೆ ಆರೋಪಿಯು ದಿನಾಂಕಃ05/04/1987 ರಂದು ಕನಕಾಪುರ ಸರ್ವೆ ನಂ-15 ರಲ್ಲಿ 6 ಎಕರೆ 2 ಗುಂಟೆ ಜಮೀನನ್ನು 36 ಸಾವಿರ ರೂಪಾಯಿಗಳಿಗೆ ಎ.ಎಂ.ನದಾಫ ಅನ್ನುವವರ

ಹೆಸರಿಗೆ ಖರೀದಿ ಮಾಡಿದ್ದು ಕಂಡುಬಂತು. ನಂತರ ತನ್ನ ಹೆಂಡತಿಯ ಹೆಸರಿಗೆ ಉಡುಗೊರೆಯಾಗಿ ಪಡೆದಿದ್ದು ಗೊತ್ತಾಯಿತು.

4. ದಿನಾಂಕ:30/05/1993 ರಂದು ಕನಕಾಪುರ ಸರ್ವೆ ನಂ-14/18 ರಲ್ಲಿ 5 ಗುಂಟೆ ಜಮೀನನ್ನು ಮತ್ತು ಸರ್ವೆ ನಂ-14/4 ರಲ್ಲಿ 19 ಗುಂಟೆ ಜಮೀನನ್ನು ಮತ್ತು ಸರ್ವೆ ನಂ.14/5+6+19 ರಲ್ಲಿ 30 ಗುಂಟೆ ಜಮೀನನ್ನು ಆರೋಪಿಯ ಮಗ ನಫ್ಸಾರಅಹ್ಮದ ಇವರ ಹೆಸರಿನಲ್ಲಿ 56 ಸಾವಿರ ರೂಪಾಯಿಗಳಿಗೆ ಖರೀದಿ ಮಾಡಿದ್ದು ಕಂಡುಬಂತು.

5. ದಿನಾಂಕ:07/06/1997 ರಂದು ಹಾವೇರಿ ಸರ್ವೆ ನಂ-64/2 ರಲ್ಲಿ 1 ಎಕರೆ 36 ಗುಂಟೆ ಜಮೀನನ್ನು ಆರೋಪಿಯ ಹೆಂಡತಿಯ ಹೆಸರಿನಲ್ಲಿ 85 ಸಾವಿರ ರೂಪಾಯಿಗಳಿಗೆ ಖರೀದಿ ಮಾಡಿದ್ದು ಕಂಡುಬಂತು.

6. ದಿನಾಂಕ:21/02/2003 ರಂದು ಹಾವೇರಿ ಸಿಟಿಎಸ್ ಸರ್ವೆ ನಂ-1555/ಬಿರ ಮನೆಯನ್ನು ಆರೋಪಿಯ ತಾಯಿ ಬಿಯಾಮಾ ಇವರ ಹೆಸರಿನಲ್ಲಿ 45 ಸಾವಿರ ರೂಪಾಯಿಗಳಿಗೆ ಖರೀದಿ ಮಾಡಿದ್ದು ಕಂಡುಬಂತು.

7. ದಿನಾಂಕ:06/06/2005 ರಂದು ಹಾವೇರಿ ಸರ್ವೆ ನಂ-99/4/ಅ 1 ರಲ್ಲಿ 1 ಎಕರೆ 20 ಗುಂಟೆ ಜಮೀನನ್ನು ಆರೋಪಿಯ ಹೆಂಡತಿ ಮಮತಾಜ ಹೆಸರಿನಲ್ಲಿ 75 ಸಾವಿರ ರೂಪಾಯಿಗಳಿಗೆ ಖರೀದಿ ಮಾಡಿದ್ದು ಕಂಡುಬಂತು.

8. ದಿನಾಂಕ:06/03/2006 ರಂದು ಹಾವೇರಿ ಸಿಟಿಎಸ್ ನಂ-1539 ರಲ್ಲಿ ಆರ್.ಸಿ.ಸಿ. ಕಟ್ಟಡ ಮತ್ತು ಖುಲ್ಲಾ ಜಾಗೆ 503.38 ಚದರ ಅಡಿ ಆಸ್ತಿಯನ್ನು ಆರೋಪಿಯ ಹೆಂಡತಿ ಮಮತಾಜ ಹೆಸರಿನಲ್ಲಿ ರೂ.1,66,100/- ರೂಪಾಯಿಗಳಿಗೆ ಖರೀದಿ ಮಾಡಿದ್ದು ಕಂಡುಬಂತು.

9. ದಿನಾಂಕ:05/04/2008 ರಂದು ಕನಕಾಪುರ ಸರ್ವೆ ನಂ-16/1 ರಲ್ಲಿ 14 ಗುಂಟೆ ಜಮೀನನ್ನು ಆರೋಪಿಯ ಹೆಂಡತಿ ಮಮತಾಜ ಹೆಸರಿನಲ್ಲಿ 28 ಸಾವಿರ ರೂಪಾಯಿಗಳಿಗೆ ಖರೀದಿ ಮಾಡಿದ್ದು ಕಂಡುಬಂತು.

10. ದಿನಾಂಕ:23/04/2008 ರಂದು ಕನಕಾಪುರ ಸರ್ವೆ ನಂ-8/1 ರಲ್ಲಿ 3 ಎಕರೆ 4 ಗುಂಟೆ ಜಮೀನನ್ನು ಆರೋಪಿಯ ಹೆಂಡತಿ ಮಮತಾಜ ಹೆಸರಿನಲ್ಲಿ 3 ಲಕ್ಷ ರೂಪಾಯಿಗಳಿಗೆ ಖರೀದಿ ಮಾಡಿದ್ದು ಕಂಡುಬಂತು.

11. ದಿನಾಂಕ:19/06/2008 ರಂದು ಹಾವೇರಿ ಸರ್ವೆ ನಂ-93/3 ರಲ್ಲಿ 21 ಗುಂಟೆ ಜಮೀನನ್ನು ಆರೋಪಿಯ ಹೆಂಡತಿ ಮಮತಾಜ ಹೆಸರಿನಲ್ಲಿ 50 ಸಾವಿರ ರೂಪಾಯಿಗಳಿಗೆ ಖರೀದಿ ಮಾಡಿದ್ದು ಕಂಡುಬಂತು.

12. ದಿನಾಂಕ:03/06/2009 ರಂದು ಹಾವೇರಿ ಸಿಟಿಎಸ್ ನಂ-1530 ಎ ರಲ್ಲಿ 99 ಚದರ ಅಡಿ ಮತ್ತು ಸಿಟಿಎಸ್ ನಂ-1531 ರಲ್ಲಿ 288 ಚದರ ಅಡಿ ಮತ್ತು ಸಿಟಿಎಸ್ ನಂ-1532 ರಲ್ಲಿ 477 ಚದರ ಅಡಿ, ಸಿಟಿಎಸ್ ನಂ-1533 ರಲ್ಲಿ 414 ಚದರ ಅಡಿ, ಸಿಟಿಎಸ್ ನಂ-1534 ರಲ್ಲಿ 594 ಚದರ ಅಡಿ, ಸಿಟಿಎಸ್ ನಂ-1541 ರಲ್ಲಿ 540 ಚದರ ಅಡಿ, ಸಿಟಿಎಸ್ ನಂ-1540 ರಲ್ಲಿ 212 ಚದರ ಅಡಿ ನಿವೇಶನಗಳಿರುವ ಹಳೆ ಮನೆ ಸಮೇತ ಆರೋಪಿಯ ಹೆಂಡತಿ ಮಮತಾಜ ಮತ್ತು ಅಳಿಯ ಮೌಲಾಸಾಬ ಹೆಸರಿನಲ್ಲಿ ರೂ.20,91,000/- ರೂಪಾಯಿಗಳಿಗೆ ಖರೀದಿ ಮಾಡಿದ್ದು ಕಂಡುಬಂತು.

13. ದಿನಾಂಕ:18/03/2011 ರಂದು ಹಾವೇರಿ ಸಿಟಿಎಸ್ ನಂ-898/ಎ 4 ರಲ್ಲಿ 1944 ಚದರ ಅಡಿ ಜಾಗೆಯನ್ನು ಆರೋಪಿಯ ಹೆಂಡತಿ ಮಮತಾಜ ಹೆಸರಿನಲ್ಲಿ 2 ಲಕ್ಷ 93 ಸಾವಿರ ರೂಪಾಯಿಗಳಿಗೆ ಖರೀದಿ ಮಾಡಿದ್ದು ಕಂಡುಬಂತು.

14. ದಿನಾಂಕ:08/12/2003 ರಂದು ಹಾವೇರಿ ಸರ್ವೆ ನಂ-64/1 ರಲ್ಲಿ 2 ಗುಂಟೆ ಜಮೀನನ್ನು ಆರೋಪಿಯ ಹೆಂಡತಿ ಮಮತಾಜ ಹೆಸರಿನಲ್ಲಿ 10 ಸಾವಿರ ರೂಪಾಯಿಗಳಿಗೆ ಖರೀದಿ ಮಾಡಿದ್ದು ಕಂಡುಬಂತು.

15. ದಿನಾಂಕ:08/12/2003 ರಂದು ಹಾವೇರಿ ಸರ್ವೆ ನಂ-64/1 ರಲ್ಲಿ 1 ಗುಂಟೆ ಜಮೀನನ್ನು ಆರೋಪಿಯ ಹೆಂಡತಿ ಮಮತಾಜ ಹೆಸರಿನಲ್ಲಿ 5 ಸಾವಿರ ರೂಪಾಯಿಗಳಿಗೆ ಖರೀದಿ ಮಾಡಿದ್ದು ಕಂಡುಬಂತು.

16. ದಿನಾಂಕ:31/07/2008 ರಂದು ಆರೋಪಿಯು ವಾಹನ ನಂ-ಕೆಎ-27 ಆರ್- 808 ದ್ವಿಚಕ್ರ ವಾಹನವನ್ನು ಆರೋಪಿಯ ಮಗ ನಫ್ರಾರಅಹ್ಮದ ಹೆಸರಿನಲ್ಲಿ ರೂ.51,400/- ಖರೀದಿ ಮಾಡಿದ್ದು ಕಂಡುಬಂತು.

17. ದಿನಾಂಕ:10/05/2010 ರಂದು ಆರೋಪಿಯು ವಾಹನ ನಂ-ಕೆಎ-27 ಎಸ್-9100 ಸುಜುಕಿ ಮೋಟಾರ ವಾಹನವನ್ನು ಆರೋಪಿಯ ಮಗ ನಫ್ರಾರಅಹ್ಮದ ಹೆಸರಿನಲ್ಲಿ ರೂ.41,358/- ಖರೀದಿ ಮಾಡಿದ್ದು ಕಂಡುಬಂತು.

18. ದಿನಾಂಕಃ14/05/2009 ರಂದು ಆರೋಪಿಯು ವಾಹನ ನಂ-ಕೆಎ-27 ಸಿ-2239 ಟಾಟಾ ಇಂಡಿಕಾ ಕಾರನ್ನು ವಾಹನವನ್ನು ಆರೋಪಿಯ ಮಗ ನಫ್ತಾರಅಹ್ಮದ ಹೆಸರಿನಲ್ಲಿ ರೂ.1,50,000/- ಖರೀದಿ ಮಾಡಿದ್ದು ಕಂಡುಬಂತು.

19. ದಿನಾಂಕಃ03/01/2011 ರಂದು ಆರೋಪಿಯು ವಾಹನ ನಂ-ಕೆಎ-27 ಪಿ-7394/95 ಟ್ರ್ಯಾಕ್ಟರನ್ನು ಆರೋಪಿಯ ಮಗ ನಫ್ತಾರಅಹ್ಮದ ಹೆಸರಿನಲ್ಲಿ ರೂ.2,50,000/- ಖರೀದಿ ಮಾಡಿದ್ದು ಕಂಡುಬಂತು.

20. ದಿನಾಂಕಃ19/05/2011 ರಂದು ಆರೋಪಿಯು ವಾಹನ ನಂ-ಕೆಎ-27 ಟಿ-6715 ಟ್ರ್ಯಾಕ್ಟರ ವಾಹನವನ್ನು ಆರೋಪಿಯ ಹೆಂಡತಿ ಹೆಸರಿನಲ್ಲಿ 2 ವರೆ ಲಕ್ಷ ರೂಪಾಯಿಗಳಿಗೆ ಖರೀದಿ ಮಾಡಿದ್ದು ಕಂಡುಬಂತು.

21. ಆರೋಪಿ ಸಿಟಿಎಸ್ ನಂ-1555 ಬಿ ಹಳೆ ಮನೆಯನ್ನು 15 ಲಕ್ಷ ರೂಪಾಯಿ ಹಣ ಖರ್ಚು ಮಾಡಿ ನವೀಕರಿಸಿದ್ದು ಕಂಡುಬಂತು. ಮನೆಯಲ್ಲಿ ಸಿಗಬಹುದಾದ ಗೃಹೋಪಯೋಗಿ ವಸ್ತುಗಳು ರೂ.2 ಲಕ್ಷ ರೂಪಾಯಿ ಇದ್ದುದು ಕಂಡುಬಂತು. ಮನೆಯಲ್ಲಿರಬಹುದಾದ ಬೆಳ್ಳಿ ಮತ್ತು ಬಂಗಾರದ ಆಭರಣಗಳು 3 ಲಕ್ಷ ರೂಪಾಯಿ ಕಿಮ್ಮತ್ತಿನದು ಕಂಡುಬಂತು.

22. ಹಾವೇರಿ ಸಿಟಿಎಸ್ ನಂ-1539 ತನ್ನ ಹೆಂಡತಿಯ ಹೆಸರಿಗೆ ಕಟ್ಟಿಸಿದ ಮಳಿಗೆಗಳ ಮೌಲ್ಯ ರೂ.3 ಲಕ್ಷ ರೂಪಾಯಿ ಮತ್ತು ಮನೆಯಲ್ಲಿರಬಹುದಾದ ಎತ್ತು ಮತ್ತು ದನಗಳ ಮೌಲ್ಯ 1 ಲಕ್ಷ ರೂಪಾಯಿ ಕಿಮ್ಮತ್ತು ಆಗಬಹುದು. ಆರೋಪಿ ಒಟ್ಟು ರೂ.63,83,868/- ಆಸ್ತಿಯನ್ನು ಸಂಗ್ರಹಿಸಿರುತ್ತಾರೆ.

23. ಆರೋಪಿ ಎಲ್ಲ ಆಸ್ತಿಗಳ ಮೇಲೆ ಮಾಡಿದ ಅಂದಾಜು ವೆಚ್ಚ, ಭರಿಸಿದ ಟ್ಯಾಕ್ಸ, ನೋಂದಣಿ ಶುಲ್ಕ ಮತ್ತು ಮುದ್ರಾಂಕ ಶುಲ್ಕ ಒಟ್ಟು ರೂ.2,87,267/- ಗಳನ್ನು ಭರಿಸಿದ್ದು ಮತ್ತು ಮಕ್ಕಳ ವಿದ್ಯಾಭ್ಯಾಸದ ಖರ್ಚು ಮತ್ತು ವಾಹನಗಳ ಇಂಧನ ಮತ್ತು ನಿರ್ವಹಣೆ ಖರ್ಚು ಮತ್ತು 2 ಜನ ಹೆಣ್ಣುಮಕ್ಕಳ ಖರ್ಚು ಮತ್ತು ಔಷಧಿ, ದೂರವಾಣಿ ಖರ್ಚು ಮತ್ತು ಕುಟುಂಬದ ಕೌಟುಂಬಿಕ ವೆಚ್ಚ ಹಾಗೂ ಹಾವೇರಿ ಜಮೀನು ಸರ್ವೆ ನಂ-64 ರ ಕೃಷಿ ಜಮೀನನ್ನು ಬಿನಶೇತ್ಕಿ ಪ್ಲಾಟುಗಳಾಗಿ ಪರಿವರ್ತಿಸಿದ ಅಂದಾಜು ಖರ್ಚು 22 ಲಕ್ಷ ರೂಪಾಯಿ ಆಗಬಹುದು ಅಂತಾ ಅಂದಾಜಿಸಲಾಗಿದೆ. ಒಟ್ಟಿಗೆ ರೂ.24,87,267/- ಆಗಬಹುದು.

24. ಆರೋಪಿಯು ತಮ್ಮ ಸೇವಾ ಅವಧಿಯಲ್ಲಿ ಗಳಿಸಿರಬಹುದಾದ ಅಂದಾಜು ಸಂಬಳ ಆದಾಯ, ಬಾಡಿಗೆ ಆದಾಯ, ಕೃಷಿ ಆದಾಯ, ಮಕ್ಕಳ ಆದಾಯ, ಸೈಟನ್ನು ಮಾರಾಟ ಮಾಡಿದ ಆದಾಯ ಒಟ್ಟು ರೂ.57,85,000/- ಆಗಬಹುದು ಅಂತಾ ಅಂದಾಜಿಸಲಾಗಿದೆ. ಆರೋಪಿಯ ಬಗ್ಗೆ ಸಂಗ್ರಹಿಸಿದ ಮಾಹಿತಿಯನ್ನು ಆರೋಪಿ ಮಾಡಿದ ಆಸ್ತಿ ಮತ್ತು ಖರ್ಚು ಸೇರಿಸಿ, ಅವರು ಗಳಿಸಿದ ಆದಾಯದೊಂದಿಗೆ ತುಲನೆ ಮಾಡಿದಾಗ, ಆರೋಪಿ ಒಟ್ಟು ರೂ.30,95,125/- ಆಸ್ತಿಯ ಅಸಮತೋಲನ ಆಸ್ತಿಯ ಮೌಲ್ಯ ಇರುವುದು ಕಂಡುಬಂತು. ಅಂದರೆ ಪ್ರತಿಶತ ಆರೋಪಿಯದು 53.32% ಅಸಮತೋಲನ ಆಸ್ತಿ ಇರುವುದು ಕಂಡುಬಂತು.

25. ಆರೋಪಿ ಸಿಟಿಎಸ್ ನಂ-1555 ತಮ್ಮ ಮನೆ ಮತ್ತು ಸಿಟಿಎಸ್ ಮನೆ ನಂ-1539 ರಲ್ಲಿ ನಿರ್ಮಿಸಿದ ಮಳಿಗೆಯಲ್ಲಿ ಮತ್ತು ಹಾನಗಲ್ಲಿನ ಅವರ ಕಛೇರಿಯಲ್ಲಿ ಶೋಧನೆ ಮಾಡಿದಾಗ, ಇನ್ನೂ ಹೆಚ್ಚಿನ ಆಸ್ತಿಗಳು ದಾಖಲೆಗಳು, ಬೆಲೆಬಾಳುವ ವಸ್ತುಗಳು ಸಿಗುವ ಸಾಧ್ಯತೆ ಇರುತ್ತದೆ ಅಂತಾ ಕಂಡುಬಂದಿರುತ್ತದೆ. ದಿನಾಂಕಃ08/03/2013 ರಂದು ನಾನು ಪೊಲೀಸ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಠಾಣೆ, ದಾವಣಗೆರೆಗೆ ವರದಿಯನ್ನು ಕೊಟ್ಟಿರುತ್ತೇನೆ.

26. ಸದರಿ ಪೊಲೀಸ ಅಧೀಕ್ಷಕರು ನನ್ನೊಂದಿಗೆ ಚರ್ಚಿಸಿ ಪ್ರಕರಣ ದಾಖಲು ಮಾಡಿಕೊಡಲು ತನಿಖೆ ನಡೆಸಲು ದಿನಾಂಕಃ21/03/2013 ರಂದು ಸೂಚನೆ ಕೊಟ್ಟಿರುತ್ತಾರೆ. ಸಾಕ್ಷಿ ಕೊಟ್ಟ ವರದಿಯನ್ನು ನಿಪಿ-1, ಸಾಕ್ಷಿ ಸಹಿ ನಿಪಿ-1(ಎ) ಅಂತಾ ಗುರುತಿಸಲಾಯಿತು. ಎಸ್.ಪಿ.ರವರು ಮಾಡಿದ ಆದೇಶವನ್ನು ಡಿ.ವೈ.ಎಸ್.ಪಿ., ಲೋಕಾಯುಕ್ತ ಹಾವೇರಿಯವರಿಗೆ ಅದೇ ದಿವಸ ನಾನೇ ಕೊಟ್ಟಿರುತ್ತೇನೆ. ದಾವಣಗೆರೆಯ ಪೊಲೀಸ ಅಧೀಕ್ಷಕರು ಕೊಟ್ಟ ಆದೇಶವನ್ನು ನಿಪಿ-2 ಅಂತಾ ಗುರುತಿಸಲಾಯಿತು. ಚಾಸಾ-58 ಎಂ.ಬಿ.ಪಾಟೀಲರವರು 2014-15 ರಲ್ಲಿ ತೀರಿಕೊಂಡಿರುತ್ತಾರೆ. ನಿಪಿ-1 ರ ಮೇಲೆ ಚಾಸಾ-58 ರವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-1(ಬಿ) ಅಂತಾ ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿಪಿ-3, ಸಾಕ್ಷಿ ಸಹಿ ನಿಪಿ-3(ಎ) ಅಂತಾ ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಯು.ಎನ್.ಜಿ. ವಕೀಲರಿಂದಃ–**

(ಶ್ರೀ ಯು.ಎನ್.ಜಿ. ರವರು ಪಾಟೀ ಸವಾಲಿಗೆ ವೇಳೆ ಕೋರಿದ್ದರಿಂದ ವೇಳೆ ನೀಡಲಾಯಿತು.)
**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.**)**
ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಹಾವೇರಿ.